ಶ್ರೀ ಸಿ. ಎಸ್. ಹುಲ್ಕೋಟಿ.—ರೋಲರ್ ಹಿಟ್ಟಿನ ಗಿರಣಿಗಳಿಗೆ ನಷ್ಟೈ ಮಾಡತಕ್ಕ ಗೋದಿಯನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆಯೇ ಅಥವಾ ಪುಡ್ ಕಾರ್ಪೊರೇಷನ್ನಿನವರು ಕೊಡುತ್ತಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಫುಡ್ ಕಾರ್ಪೊರೇಷನ್ ಮುಖಾಂತರ ಕೇಂದ್ರ ಸರ್ಕಾರದವರು ನಷ್ಟೈ ಮಾಡುತ್ತಾರೆ.

ಶ್ರೀ ಸಿದ್ದಯ್ಯ ಕಾಶೀಮಠ.—ಈಗ ಕೇಂದ್ರ ಸರ್ಕಾರದವರು ರೋಲರ್ ಹಿಟ್ಟಿನ ಗಿರಣಿಗಳಿಗೆ ನಷ್ಟೈ ಮಾಡತಕ್ಕ ಗೋದಿಯನ್ನು ರಾಜ್ಯ ಸರ್ಕಾರದ ಮುಖಾಂತರ ಹಂಚುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಅಂಥಾ ಅವಶ್ಯಕತೆಯೇನೂ ಈಗ ಕಾಣುವುದಿಲ್ಲ. ಮತ್ತು ಈಗ ಇದರಿಂದ ಯಾವ ರೋಲರ್ ಫ್ಲೋರ್ ಮಿಲ್ಲಗೂ ತೊಂದರೆಯಾಗುತ್ತಿಲ್ಲ.

ಶ್ರೀ ಸಿ. ಎಸ್. ಹುಲ್ಕೋಟಿ.—ರೋಲರ್ ಫ್ಲೋರ್ ಮಿಲ್ಲುಗಳಿಗೆ ನಷ್ಟೈ ಮಾಡತಕ್ಕ ಗೋದಿಗೆ ಒಂದು ರೇಟು ಮತ್ತು ಬೇರೆಯುವರಿಗೆ ನಷ್ಟೈ ಮಾಡತಕ್ಕ ಗೋದಿಗೇ ಒಂದು ರೇಟನ್ನು ಫಿಕ್ಸ್ ಮಾಡಿದ್ದಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಹಾಗೇನೂ ಇಲ್ಲ. ಒಂದುವೇಳೆ ವ್ಯತ್ಯಾಸ ಮಾಡುತ್ತಾರೆ ಎಂದರೆ ಅದನ್ನು ನಾನು ಎನ್‌ಕ್ವೈರಿ ಮಾಡುತ್ತೇನೆ.

Agencies to purchase Foodgrains.

*Q.—44. Sri C. S. HULKOTI (Mundargi).—

Will the Government be pleased to state :—

(*a*) whether the wholesale and retail agencies have been settled by the Government to purchase food grains produced during the current harvesting season ;

(*b*) if so, which are those agencies ;

(*c*) whether the said agencies possess sufficient funds to purchase the stocks ;

(*d*) whether the Government is giving any financial aid to them and if so, what is the percentage of financial aid ;

(*e*) what arrangements have been made for storing the purchased stocks ;

(*f*) the total percentage of stocks the producer can hold ;

(*g*) whether Government has taken steps to maintain trained and qualified sufficient staff for the purchase of produce of foodgrains ?

A.—Sri B. D. JATTI (Minister for Food).—

(*a*) Yes.

(*b*) The State Government have decided to purchase paddy, jowar, local wheat and maize, through the Food Corporation of India which will undertake this operation through the Co-operative Societies ; but where Co-operatives are not in a position to do so, the purchase operations will be undertaken through Millers and other agents.

(*c*) and (*d*) The Food Corporation of India provide funds for the purchase of foodgrains in Mysore Division. In the remaining divisions, share capital contribution is given to the Co-operative Societies to enable

them to raise their share capital to enable them to undertake the purchase operations. The Food Corporation of India will provide funds to the Co-operative Societies both for future procurement operations and also in respect of stocks which have already been procured by them in these three Divisions after certain administrative arrangements are finalised.

(e) The stocks are stored in godowns belonging to :—

(i) The State and Central Governments.
(ii) The State and Central Warehousing Coroporations.
(iii) Rice Mills, and
(iv) Private parties taken on hire.

(f) The producer is permitted to retain whatever he grows after giving the levy.

(g) Yes.

ಶ್ರೀ ಸಿ. ಎಸ್. ಹುರ್ಕೋಟಿ.—ಈಗ ನರ್ಕಾರದವರು ಕೋ-ಆಪರೇಟಿವ್ ಸೊಸೈಟಿಗಳಿಗೆ ಹಣವನ್ನೇನು ಪೂರೈಸುತ್ತಾರೋ ಅದನ್ನು ಯಾವ ಏಜೆನ್ಸಿ ಮುಖಾಂತರ ಪೂರೈಸುತ್ತಾರೆ ?

† ಶ್ರೀ ಬಿ. ಡಿ. ಜತ್ತಿ.—ಏಪೆಕ್ಸ್ ಬ್ಯಾಂಕ್ ಮುಖಾಂತರ.

ಶ್ರೀಮತಿ ಬನವರಾಜೇಶ್ವರಿ.—(ಊ) ಪ್ರಶ್ನೆಗೆ ಉತ್ತರವಾಗಿ ರೈತನು ಕೊಡಬೇಕೆಂದು ವಿಧಿಸಿರತಕ್ಕ ಆಹಾರಧಾನ್ಯವನ್ನು ಕೊಟ್ಟನಂತರ ಉತ್ಪಾದಕನು ತಾನು ಬೆಳೆಯುವುದೆಲ್ಲವನ್ನು ಇಟ್ಟುಕೊಳ್ಳಬಹುದು ಎಂದು ಹೇಳಿದ್ದೀರಿ. ಈಗ ರಾಯಚೂರು ಜಿಲ್ಲೆಯಲ್ಲಿ ರೈತರು ಲೆವ್ಹಿ ಕೊಟ್ಟಮೇಲೆ ಇರತಕ್ಕ ಮಾಲನ್ನು ಬೇರೆಯವರಿಗೆ ಮಾರಾಟಮಾಡುವುದಕ್ಕೆ ಅಧಿಕಾರಿಗಳು ತೊಂದರೆಯನ್ನು ಕೊಡುತ್ತಿರುವುದು ನರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ರೈತ ಎಲ್ಲಿ ಬೇಕಾದರೂ ಮಾರಾಟ ಮಾಡಬಹುದು. ಒಬ್ಬ ಹೋಲ್‌ಸೇಲ್ ಡೀಲರು ಮತ್ತೊಬ್ಬ ಹೋಲ್‌ಸೇಲ್ ಡೀಲರಿಗೆ ಆಹಾರಧಾನ್ಯವನ್ನು ಮಾರಾಟ ಮಾಡಬೇಕಾದರೆ ಪರ್ಮಿಷನ್ ತೆಗೆದುಕೊಳ್ಳಬೇಕು.

ಶ್ರೀ ಕೆ. ಎಚ್. ರಂಗನಾಥ್.—ಮೈಸೂರು ಡಿವಿಜನ್‌ನಲ್ಲಿ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಫುಡ್ ಕಾರ್ಪೊರೇಷನ್‌ನವರು ತಮ್ಮ ಏಜೆನ್ಸಿಯ ಮುಖಾಂತರ ಫುಡ್ ಪ್ರೊಕ್ಯೂರ್‌ಮೆಂಟ್ ಮಾಡದೆ ತಾವೇ ನೇರವಾಗಿ ಫುಡ್ ಪ್ರೊಕ್ಯೂರ್‌ಮೆಂಟ್ ಮಾಡುತ್ತಿದ್ದಾರೆ, ಆದರಿಂದ ತೊಂದರೆಯಾಗುತ್ತಿದೆ. ಆದ್ದರಿಂದ ಅವ್ಯವಹೇರೆ ನರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಬಿ. ಡಿ. ಜತ್ತಿ.—ತೊಂದರೆ ಇರುವುದನ್ನು ನರಿಮಾಡಿದ್ದೇವೆ.

ಶ್ರೀ ಜಿ. ರಾಮೇಗೌಡ.—ಆಹಾರಧಾನ್ಯವನ್ನ ಕೊಳ್ಳುವುದಕ್ಕೋಸ್ಕರ ಜಿಲ್ಲಾ ಬ್ಯಾಂಕುಗಳಿಗೆ ಎಷ್ಟು ಹಣವನ್ನು ಕೊಡಬೇಕೆಂದು ಉದ್ದೇಶಿಸಲಾಗಿತ್ತು ಅಷ್ಟು ಹಣವನ್ನು ಪೂರ್ತಿಯಾಗಿ ಈ ಜಿಲ್ಲಾ ಬ್ಯಾಂಕ್‌ಗಳಿಗೆ ಕೊಡಿಸುವುದಕ್ಕೆ ಏರ್ಪಾಡು ಮಾಡಿಸುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಇದುವರೆಗೂ ಆ ತರಹ ತಕರಾರು ಯಾವುದೂ ಬಂದಿಲ್ಲ. ಒಂದು ವೇಳೆ ಯಾವುದಾದರೂ ತಕರಾರು ಬಂದರೆ ಅದನ್ನು ನಾನು ವಿಚಾರ ಮಾಡುತ್ತೇನೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗ ಒಬ್ಬ ಹೋಲ್‌ಸೇಲ್ ಡೀಲರು, ಒಬ್ಬ ರೀಟೇಲ್ ಡೀಲರಿಗೆ ಆಹಾರ ಧಾನ್ಯವನ್ನು ಮಾರಾಟ ಮಾಡಬೇಕಾದರೆ ನರ್ಕಾರದಿಂದ ಪರ್ಮಿಷನ್ ಏನೂ ಬೇಕಾಗಿಲ್ಲ, ಒಬ್ಬ ಹೋಲ್‌ಸೇಲ್ ಡೀಲರು ಮತ್ತೊಬ್ಬ ಹೋಲ್‌ಸೇಲ್ ಡೀಲರಿಗೆ ಆಹಾರ ಧಾನ್ಯವನ್ನ ಮಾರಾಟ ಮಾಡಬೇಕಾದರೆ ಡೆಪ್ಯುಟಿ ಕಮೀಷನರಿಂದ ಪರ್ಮಿಷನ್ ತೆಗೆದುಕೊಳ್ಳಬೇಕೆಂದು ಹೇಳಿದಿರಿ, ಹಾಗಾದರೆ ಸ್ಥಳದಲ್ಲಿಯೇ ಇರತಕ್ಕ ಒಬ್ಬ ಹೋಲ್‌ಸೇಲ್ ಡೀಲರ್ ಮತ್ತೊಬ್ಬ ಹೋಲ್‌ಸೇಲ್ ಡೀಲರಿಗೆ ಆಹಾರ ಧಾನ್ಯವನ್ನ ಮಾರಾಟ ಮಾಡಬೇಕಾದರೂ, ಅವರು ಡೆಪ್ಯುಟಿ ಕಮೀಷನರಿಂದ ಪರ್ಮಿಷನ್ ತೆಗೆದುಕೊಳ್ಳಬೇಕೇ ?

ಶ್ರೀ ಬಿ. ಡಿ. ಜತ್ತಿ.—ಈಗ ಒಂದೇ ಸ್ಥಳದಲ್ಲಿ 5-6 ಜನ ಹೋಲ್‌ಸೇಲ್ ಡೀಲರುಗಳು ಇದ್ದರೆ ಹೆಚ್ಚಿಗೆ ಹಣ ಇದ್ದವರು ಒಬ್ಬರ ಕಡೆಯಿಂದ ಮತ್ತೊಬ್ಬರು ತೆಗೆದುಕೊಂಡು ಆಹಾರದ ಮಾರಾಟದಲ್ಲಿ ಪರ್ಸೇಂಟೇಜ್ ಆಫ್ ವ್ಯಾಫಿಟ್ಟನ್ನು ಜಾಸ್ತಿ ಮಾಡುತ್ತಾರೆ. ಮತ್ತು ಬಹಳ ಹಣವನ್ನು ಆಹಾರ

(ಶ್ರೀ ಬಿ. ಡಿ. ಜತ್ತಿ)

ಧಾನ್ಯದ ಮೇಲೆ ಹಾಕಿರತಕ್ಕವರು ಬೆಲೆಯನ್ನು ಜಾಸ್ತಿ ಮಾಡುತ್ತಾರೆ. ಆದ್ದರಿಂದ ಅದನ್ನು ತಪ್ಪಿಸುವ ನಲುವಾಗಿ ಅವರು ಡೆಪ್ಯುಟಿ ಕಮೀಷನರಿಂದ ಪರ್ಮಿಷನ್ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಈ ಆಹಾರಧಾನ್ಯದ ಲೆವಿ ಸಿಸ್ಟಮ್ ಹಿಂದೆ ಮೈಸೂರು ದೇಶದಲ್ಲಿ ಬಂದಿತ್ತು. ಆಗ ರೈತರಿಗೆ ತೊಂದರೆಯಾಗುತ್ತದೆ ಎಂದು ಸರ್ಕಾರಕ್ಕೆ ತಿಳಿಸಿದಾಗ ಅದನ್ನು ಬದಲಾವಣೆ ಮಾಡಿ ಎಷ್ಟು ಲೆವ್ಯಿ ಹಾಕಿದ್ದರೋ ಅದರಲ್ಲಿ ಇಷ್ಟು ಭಾಗವನ್ನು ವಸೂಲು ಮಾಡಬೇಕೆಂದು ಮಾಡಿದರು. ಈಗ ಸರ್ಕಾರದವರು ಏನು ಲೆವಿ ಸಿಸ್ಟಮ್ ಮಾಡಿದ್ದಾರೆಯೋ ಅದರಿಂದ ಬ್ಲಾಕ್ ಮಾರ್ಕೆಟಿಯರುಗಳಿಗೆ ಪ್ರೋತ್ಸಾಹ ಮಾಡಿದಂತಾಗಿದೆ. ಆದ್ದರಿಂದ ಸರ್ಕಾರದವರು ಈಗ ಮಾಡಿರತಕ್ಕ ಲೆವಿ ಸಿಸ್ಟಂ ಅನ್ನು ಬದಲಾವಣೆ ಮಾಡಿ ಪೂರ್ ಪ್ರೂಫ್ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ಈಗ ಮಾಡಿರತಕ್ಕ ಲೆವ್ಯಿ ಸಿಸ್ಟಮ್ ಅನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಈ ವರ್ಷ ಪುನರ್ ವಿಮರ್ಶೆ ಮಾಡುವುದಕ್ಕೆ ಸಾಧ್ಯವಿಲ್ಲ. ಮುಂದಿನ ವರ್ಷ ನೀವೇನಾದರೂ ಸಲಹೆ ನೀಡಿದರೆ ಅದನ್ನು ಯೋಚನೆ ಮಾಡುತ್ತೇವೆ.

ಶ್ರೀ ಎಸ್. ಗೋಪಾಲ ಗೌಡ.—ಈ ಲೆವಿ ಆಜ್ಞೆಯನ್ನು ಭಾರತ ಸರ್ಕಾರದ ರಕ್ಷಣಾ ಕಾನೂನಿನ ನಿಯಮಗಳ ಪ್ರಕಾರ ಮಾಡಿದ್ದಾರೆ. ಅದೇ ಪ್ರಕಾರ ಬೆಲೆಗಳನ್ನೂ ಗೊತ್ತು ಮಾಡಿದ್ದಾರೆ. ಈಗ ಆಹಾರದ ಕಾರ್ಪೊರೇಷನ್ನಿನವರು ಹಣವನ್ನು ತೆಗೆದುಕೊಂಡು ಬಂದು ಆಹಾರವನ್ನು ಕೊಳ್ಳತಕ್ಕ ಒಂದು ಜವಾಬ್ದಾರಿಯನ್ನು ಮಾತ್ರ ನಿರ್ವಹಿಸುತ್ತಿದ್ದಾರೆ. ಅವರು ಸರ್ಕಾರದ ಅಧೀನದಲ್ಲಿ ಕೆಲಸ ಮಾಡುತ್ತಿದ್ದಾರೆಯೇ ಅಥವಾ ಅವರ ಒಂದು ಕಾರ್ಯಕ್ರಮದಂತೆ ನಡೆದುಕೊಂಡು ಹೋಗುತ್ತಾರೆಯೇ?

ಶ್ರೀ ಬಿ. ಡಿ. ಜತ್ತಿ.—ಫುಡ್ ಕಾರ್ಪೊರೇಷನ್ನಿನವರು ಸರ್ಕಾರದ ಏಜೆಂಟರಾಗಿ ಕೆಲಸ ಮಾಡುತ್ತಿದ್ದಾರೆ.

Procurement Policy for Jowar and Wheat.

*Q.—199. Sri A. J. DODDAMETI (Ron).—

Will the Government be pleased to state :—

(a) whether it is fact that Government has notified procurement policy on levy basis per acre for Jowar and Wheat at 25 Kgs. per acre ;

(b) whether they are aware that the yield of Jowar when compared to wheat per acre is much more or about treble the quantity of Wheat ;

(c) if so, the reasons for equating Jowar with Wheat for equal levy per acre ?

A.— Sri B. D. JATTI (Minister for Food).—

(a) The scale for sale of Jowar and Local Wheat is as follows :—

(1) In respect of first acre of the holding of the grower.	Nil.
(2) In respect of every acre of the next nine acres of the holding of the grower.	Twenty-five Kilograms per acre.
(3) In respect of every acre of the remaining acre of the holding of the grower.	Thirty Kilograms per acre.